# ಆಶ್ವಾಸನ ಫೌಂಡೇಶನ್ ನಿಂದ ವಾಕಥಾನ್ ಏಕತಾ ನಡಿಗೆ




ಸಮಾಜದಲ್ಲಿ ಸಂಭವಿಸುವ ಘಟನೆಗಳು ಮತ್ತು ಅದರ ಪರಿಹಾರ ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಜನರಲ್ಲಿ ಪ್ರಜ್ಞೆ ಮೂಡಿಸಲು ಇತ್ತೀಚೆಗೆ ಏಪ್ರಿಲ್ 30ರಂದು ವಾಕಥಾನ್ ಶಾಂತಿ ನಡಿಗೆಯನ್ನು, ಆಶ್ವಾಸನ ಸೈನ್ಸ ತಂಡದವರು ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಜಾಗೃತಿ ನಡಿಗೆಯನ್ನು ಏರ್ಪಡಿಸಿದ್ದರು.

ಸುಮಾರು 200 ಕ್ಕೂ ಹೆಚ್ಚುಯುವಕರು ಇದರಲ್ಲಿ ಪಾಲ್ಗೊಂಡಿದ್ದರು. ಕಮ್ಮನಹಳ್ಳಿ ಯಲ್ಲಿರುವ ಆಶ್ವಾಸನ ಕಚೇರಿಯ ಬಳಿ ಪ್ರಾರಂಭಗೊಂಡ ಈ ನಡಿಗೆಯನ್ನು ಕನ್ನಡದ ಯುವ ನಟ ಪ್ರತಾಪ್ ಸಿಂಹ ರೆಡ್ಡಿ ,ಹಸಿರು ಬಾವುಟವನ್ನು ತೋರಿಸಿ ಉದ್ಘಾಟಿಸಿದರು.

ವಿದ್ಯಾರ್ಥಿಗಳ ಪಾಲಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈ ಕಾರ್ಯಕ್ರಮಕ್ಕೆ ಅನುದಾನ ನೀಡಿ ಪ್ರೋತ್ಸಾಹಿಸಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ ಜನ ಉತ್ಸಾಹದಿಂದ ಭಾಗವಹಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮ ಎಲ್ಲರ ಬೆಂಬಲದಿಂದಾಗಿ ಯಶಸ್ವಿಯಾಗಿ ನೆರವೇರಿತು.

ವರದಿ: ರಾಜೇಶ್ ಸದ್ಗೋಪನ್




## ಶ್ರೀ ಸತ್ಯಾತ್ಮ ವಾಣಿ...

ಲೇಖನ. ಮಧುಸೂದನ. ಕಲಿಭಟ್. ಧಾರವಾಡ.

ಮಕ್ಕಳಿಗೆ ಸರಿಯಾದ ಸಮಯಕ್ಕೆ ಉಪಹಾರ ಕೊಡದೇ ಇದ್ದರೇ ಸ್ವಲ್ಪ ಸಮಯ ಅಳಬಹುದು. ಆದರೆ ಸರಿಯಾದ ಸಮಯಕ್ಕೆ ಸಂಸ್ಕಾರ ಕೊಡದಿದ್ದರೆ ಮಕ್ಕಳು ಜೀವನ ಪೂರ್ತಿ ಅಳುವರು.

ಶ್ರೀಗಳವರು ಎಲ್ಲ ಪಾಲಕರಿಗೆ ತಮ್ಮ ತಮ್ಮ ಮಕ್ಕಳನ್ನು ಕಾಪಾಡುವ ಪದ್ಧತಿಗೆ ಉದಾಹರಣೆ ಸಹಿತ ಎಲ್ಲರನ್ನೂ ಎಚ್ಚರಿಸಿದ್ದಾರೆ.

ಮಕ್ಕಳಿಗೆ ಮಾತು ಬಂದು ತಿನಿಸಿನ ಬಗ್ಗೆ ತಿಳುವಳಿಕೆ ಬರುವವರೆಗೆ ಪಾಲಕರು ಮಕ್ಕಳನ್ನು



ಕಾಳಜಿಯಿಂದ ನೋಡಿಕೊಳ್ಳಬೇಕು. ಹೀಗೆ ಕಾಳಜಿ ತೆಗೆದುಕೊಳ್ಳುವಲ್ಲಿ ತುಸು ಏರುಪೇರಾದರೆ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಆಗುವದರಲ್ಲಿ ಸಂಶಯವಿಲ್ಲ. ಮಾತು ಬಾರದ ಮಕ್ಕಳಿಗೆ ಹಸಿವು ಆದರೆ, ಯಾವುದಾದರೊಂದು ವಸ್ತು ಬೇಕಾದಲ್ಲಿ ಅವು ತಮ್ಮದೇ ಆದ ಭಾಷೆಯಲ್ಲಿ ಹೇಳುತ್ತವೆ. ಒಂದು ವೇಳೆ ಅವುಗಳ ವಿರೋಧ ಆದರೆ ಹಸಿವು ಆದಾಗ ಅಳುತ್ತವೆ. ಪಾಲಕರು ತಮ್ಮ ಕೆಲಸದಲ್ಲಿ ನಿರತರಾದರೆ ಸ್ವಲ್ಪ ಸಮಯ ಅತ್ತು ಸುಮ್ಮನಾಗುತ್ತವೆ.

ಶ್ರೀಗಳು ಮಕ್ಕಳ ಮುಂದಿನ ಜೀವನವನ್ನು ಪರಿಗಣಿಸಿ ಅವರಿಗೆ ಒಳ್ಳೆಯ ಸಂಸ್ಕಾರವನ್ನು ಉಪಹಾರದ ಉದಾಹರಣೆ ಸಹಿತ ಹೇಳಿದ್ದಾರೆ. ಮಕ್ಕಳಿಗೆ ಆಗುವ ಸಂಸ್ಕಾರ ಎಂದರೆ ಅಕ್ಷರಾಭ್ಯಾಸ, ಉಪನಯನ ಮುಂತಾದವುಗಳು ಬಹಳ ಮಹತ್ವದ ಪಾತ್ರ ವಹಿಸುತ್ತವೆ. ಮಕ್ಕಳ ಮನಸ್ಸು ಪಕ್ವ ಆಗುವ ಸಮಯಕ್ಕೆ ಅಕ್ಷರ ಹೇಳಿದಾಗ, ಅವರಿಗೆ ಯಾವುದೇ ಲೌಕಿಕ ವಿಷಯ ಮನದಲ್ಲಿ ಹೋಗದೇ ಅಕ್ಷರ ಕಲಿಯುವ ಕಡೆಗೆ ಮನಸು ಹರಿಯುವದು. ಅದರಂತೆ, ಉಪನಯನ ಪುತ್ರನನ್ನು ಎರಡನೇಯ ಹಂತದಲ್ಲಿ ಹುಟ್ಟಿಸಿ ಧರ್ಮ, ನ್ಯಾಯ ನೀತಿ, ಗುರು ಹಿರಿಯರಿಗೆ ಗೌರವ ಮುಂತಾದ ವಿಷಯಗಳ ಬಗ್ಗೆ ಹೆಚ್ಚು ತಿಳುವಳಿಕೆ ಬರುವದು.

ನಾವು ಆಧ್ಯಾತ್ಮಿಕವಾಗಿ ಸಂಸ್ಕಾರ ಹೊಂದಿದ ಬಾಲಕ, ಮತ್ತು ಲೌಕಿಕವಾಗಿ ಏನೋ ಒಂದು ಕಾರ್ಯಕ್ರಮ ಎಂದು ಮಾಡಿದ ಉಪನಯನ ಮಾಡಿಸಿ ಕೊಂಡ ಬಾಲಕರಲ್ಲಿ ಬಹಳ ವ್ಯತ್ಯಾಸ ಕಾಣುತ್ತೇವೆ.

ಧಾರ್ಮಿಕವಾಗಿ ಸಂಸ್ಕಾರಗೊಂಡ ಬಾಲಕನಲ್ಲಿ ಹೆಚ್ಚು ತೇಜಸ್ಸು ಇರುತ್ತದೆ. ಏಕೆಂದರೆ ಅವನು ನಿತ್ಯ ಸಂಧ್ಯೆ, ಸ್ತೋತ್ರ ಕಲಿತು ಮುಂದೆ ಇರುತ್ತಾನೆ. ಅದೇ ಕಾಟಾಚಾರಕ್ಕೆ ಉಪನಯನ ಆದ ಬಾಲಕನಿಗೆ ನಿತ್ಯ ಧಾರ್ಮಿಕ ಕರ್ಮ ಹೇಳುವವರೇ ಯಾರೂ ಇರುವದಿಲ್ಲ.

ಆದ್ದರಿಂದ ಸರಿಯಾದ ಸಮಯಕ್ಕೆ ಸಂಸ್ಕಾರ ಆಗದಿದ್ದರೆ ಮಕ್ಕಳು ತಮ್ಮ ಜೀವನದಲ್ಲಿ ಸನಾತನ ಧರ್ಮ ಏನೂ ಎಂಬುದನ್ನು ತಿಳಿಯದೇ ಗೊಣಾಡುವರು.

ಅದನ್ನೇ ಶ್ರೀಗಳವರು ಸಂಸ್ಕಾರ ಇರದೇ ಇದ್ದರೇ ಮಕ್ಕಳು ಅಳುವರು ಎಂದು ಹೇಳಿದ್ದಾರೆ.

## ಅಣ್ಣನ ಗುಣಗಾನ

–ದೇವಕಿಸುತ



ನೀನಾಗಿರುವೆ ನೀಲಮಣಿ
ಅವರಿಲ್ಲ ಇವರಿಲ್ಲ ಹೇಳುವರೆಲ್ಲ ಜನ
ಆಡುವ ಮಾತದು ನಿಜ– ಆಗಿದ್ದರು ಒಪ್ಪುವುದಿಲ್ಲ ಮನ
ಚಿತ್ರ ಜಗತ್ತಿನ ಹೊನ್ನ ಕಿರೀಟಕೆ ನೀನಾಗಿರುವೆ ನೀಲಮಣಿ
ಕನ್ನಡ ನಾಡಿನ ಬೆಳ್ಳಿಯ ತೆರೆಯಲಿ ನಿತ್ಯ ನಿರಂತರ ನೀನೆ ಧಣಿ.

ರಂಗಭೂಮಿಯ ಬಣ್ಣದ ಮುಖಗಳ
ಎಲ್ಲ ಬಣ್ಣದಲಿ ನೀನಿರುವೆ
ನಾಡಿನ ಜನರಾಭಿಮಾನದ ಹೊಳೆಯಲಿ
ಗಾನದ ಸುಧೆಯ ಹರಿಸಿರುವೆ

ಹನುಮನ ಗುಡಿಯಲಿ ರಾಯರ–
ಗುಡಿಯಲಿ ಹಾಡಿದ ಭಕುತ ನೀನಾಗಿರುವೆ
ಕಾಡಿನ ಬೇಡನು ನೀಡಿದ ಕಣ್ಣನು
ನಾಡಿನ ನೋಟಕೆ ನೀಡಿರುವೆ

ಕಲಿತೇ ಇಲ್ಲ ಕಲಿಸಿಯು ಇಲ್ಲ
ನಿನ್ನ ಜೀವನವೆ ಹೊಸ ಪಾಠ
ಭೋಗದ ಜೀವನ ತ್ಯಾಗಕೆ ಮಾಗಿಸಿ
ಯೋಗದಿ ಬರೆದೆ ನೀ ಹಲವು ಪುಟ

ಚಿಂತನ ಮಂಥನ ನಾಡಿನೊಳೆಲ್ಲಾ
ನಿನ್ನಯ ಹೆಸರಿನ ಗುಣಗಾನ
ಇಲ್ಲಾ ನೀ ಜೊತೆಗಿಲ್ಲಾ ಎಂದರೆ
ಒಪ್ಪುವುದಿಲ್ಲ ಮನ